ಎಲ್.ಎ.ಸಿ ನಂ: 626/2018
ಪಿ.ಡಬ್ಲ್ಯೂ ನಂ: 01

ಇಂದು ದಿನಾಂಕ: 28.03.2026ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಸಿ ಬಿ ಪಿ ವಕೀಲರಿಂದ:**

ನಾನು ಈ ಪ್ರಕರಣದಲ್ಲಿ ಅರ್ಜಿದಾರನಿದ್ದು ನನ್ನ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರ ಸಲ್ಲಿಸಿದ್ದೇನೆ, ಅದರಲ್ಲಿರುವ ಸಹಿಗಳು ನನ್ನದಾಗಿರುತ್ತದೆ. ಪ್ರಮಾಣಪತ್ರದಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದು, ಅವುಗಳು ಸತ್ಯವಾಗಿವೆ. ನಾನು ಈ ಪ್ರಕರಣದಲ್ಲಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಅರ್ಜಿದಾರರು ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಯಾಗಿ ಗುರುತಿಸಲಾಯಿತು.

| ಅ. ನಂ. | ದಾಖಲೆಗಳ ವಿವರ | ನಿಶಾನೆ ಸಂಖ್ಯೆ |
|---|---|---|
| 1 | Reference Application | Ex.P1 |
| 2 | Sale deed dated 15.07.2011 of Kasaba, Athani | Ex.P2 |
| 3 | Sale deed dated 19.04.2011 of Kasaba, Athani | Ex.P3 |
| 4 | Sale deed dated 08.05.2012 of Kasaba, Athani | Ex.P4 |
| 5 | Agreement to sell dated 14.07.2010 of Athani | Ex.P5 |
| 6 | Agreement to sell dated 03.12.2010 of Athani | Ex.P6 |
| 7 | Judgment in LAC NO.650/2018 | Ex.P7 |

ಈ ಕಾರಣ ಅರ್ಜಿಯನ್ನು ಪುರಸ್ಕರಿಸಿ ಅರ್ಜಿಯಲ್ಲಿ ಕೋರಿರುವಂತೆ ಹೆಚ್ಚಿನ ಬೆಲೆ ನಿಗದಿ ಮಾಡಬೇಕೆಂದು ಪ್ರಾರ್ಥನೆ.

ಪಾಟೀ **ಸವಾಲು: 1ನೇ ಪ್ರತಿವಾದಿ ಪರ ಮಾನ್ಯ ಡಿ ಜಿ ಪಿ ವಕೀಲರಿಂದ:**

ಮುಳುಗಡೆಯಾದ ಜಮೀನು ನನ್ನ ಸ್ವಂತ ಜಮೀನು ಇರುವುದಿಲ್ಲ. ಅರ್ಜಿದಾರರಿಗೆ ಮೊಣಕಾಲಿನ ಸಮಸ್ಯೆ ಇರುವುದರಿಂದ ಅವರಿಗೆ ಪ್ರಯಾಣಿಸಲಾಗುವುದಿಲ್ಲ, ಆದ್ದರಿಂದ ಅವರಿಗೆ

ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಆಗುವುದಿಲ್ಲ. ಈ ಸಂಬಂಧವಾಗಿ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅರ್ಜಿದಾರರು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ಹೇಳಿದರೆ ನಿಜಸಂಗತಿ ತಿಳಿಯುತ್ತದೆ ಎಂಬ ಕಾರಣಕ್ಕೆ ಅವರ ಪರವಾಗಿ ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಥಣಿ ಶಹರ ಇದು ತಾಲೂಕಾ ಸ್ಥಳ ಎಂದರೆ ಸರಿ. ಅಥಣಿ ಶಹರದ ವ್ಯಾಪ್ತಿಯು ಸುಮಾರು 20-25 ಕಿಮೀ ಇರುತ್ತದೆ ಎಂದರೆ ಸರಿ. ಅಥಣಿ ಸರಹದ್ದಿಗೆ ಸಂಬಂಧಿಸಿದ ಒಂದೊಂದು ಭಾಗದಲ್ಲಿ ಒಂದೊಂದು ಫಲವತ್ತತೆಯ ಜಮೀನುಗಳು ಇವೆ ಎಂದರೆ ಸರಿ. ಜಮೀನಿನ ಫಲವತ್ತತೆ ಆಧಾರದ ಮೇಲೆ ಜಮೀನುಗಳ ಬೆಲೆ ನಿರ್ಧಾರವಾಗಿರುತ್ತದೆ ಎಂದರೆ ಸರಿ. ನೀರಾವರಿ ಜಮೀನುಗಳಿಗೆ, ಅಥಣಿ ಶಹರಕ್ಕೆ ಹೊಂದಿಕೊಂಡ ಜಮೀನುಗಳಿಗೆ ಬೆಲೆ ಹೆಚ್ಚಿಗೆ ಇರುತ್ತದೆ ಎಂದರೆ ಸರಿ.

2. ನಾನು ಅಥಣಿ ಶಹರದ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ. ಅಥಣಿ ಶಹರದ ನಕಾಶೆಯಲ್ಲಿ ನನ್ನ ಜಮೀನು ಅಥಣಿ ಶಹರದಿಂದ ಎಷ್ಟು ದೂರದಲ್ಲಿರುತ್ತದೆ ಎಂದು ತಿಳಿಯುತ್ತದೆ ಎಂದರೆ ಸರಿ. ಅಥಣಿ ಶಹರದ ನಕಾಶೆಯನ್ನು ಹಾಜರುಪಡಿಸಿದರೆ ನನ್ನ ಜಮೀನು ಅಥಣಿ ಶಹರದಿಂದ ದೂರವಿರುತ್ತದೆ ಎಂದು ತಿಳಿಯುತ್ತದೆ ಎಂದು ಉದ್ದೇಶಪೂರ್ವಕವಾಗಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ಜಮೀನಿನ ಉತಾರೆಯಲ್ಲಿ ಜಮೀನಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಅಂದರೆ ಮಣ್ಣಿನ ಗುಣಧರ್ಮ, ನೀರಾವರಿಯ ಮೂಲ ಮತ್ತು ಬೆಳೆ ನಮೂನೆಗಳ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಸ್ವಾಧೀನಪಡಿಸಿಕೊಳ್ಳುವ ಪೂರ್ವದ ಅವಧಿಗೆ ಸಂಬಂಧಿಸಿದ ನನ್ನ ಜಮೀನಿನ ಉತಾರೆಯಲ್ಲಿ ಮಣ್ಣಿನ ಗುಣಧರ್ಮ, ಬೆಳೆ ನಮೂನೆ ಹಾಗೂ ನೀರಾವರಿ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಸ್ವಾಧೀನಪಡಿಸಿಕೊಳ್ಳುವ ಪೂರ್ವದ ಅವಧಿಗೆ ಸಂಬಂಧಿಸಿದ ನನ್ನ ಜಮೀನಿನ ಉತಾರೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಜಮೀನಿನ ಉತಾರೆಯನ್ನು

ಹಾಜರುಪಡಿಸಿದರೆ ನನ್ನ ಜಮೀನು ಒಣಬೇಸಾಯ ಜಮೀನು ಇರುತ್ತದೆ ಎಂದು ತಿಳಿಯುತ್ತದೆ ಎನ್ನುವ ಕಾರಣಕ್ಕೆ ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

4. ನಿಪಿ-5 ಮತ್ತು ನಿಪಿ-6 ಖರೀದಿ ಕರಾರು ಪತ್ರಗಳು ಮತ್ತು ನಿಪಿ-2 ರಿಂದ ನಿಪಿ-4 ಖರೀದಿ ಪತ್ರಕ್ಕೆ ಸಂಬಂಧಿಸಿದ ಜಮೀನುಗಳು ಮತ್ತು ನಮ್ಮ ಸ್ವಾಧೀನಗೊಂಡ ಜಮೀನುಗಳು ಒಂದೇ ಗುಣಮಟ್ಟದ ಜಮೀನು ಎಂದು ತೋರಿಸಲು ತಜ್ಞರಿಂದ ಮಣ್ಣು ಪರೀಕ್ಷಿಸಿ ಯಾವುದೇ ವರದಿ ಸಲ್ಲಿಸಿರುವುದಿಲ್ಲ. ಸದರಿ ಜಮೀನುಗಳು ನಮ್ಮ ಜಮೀನಿನ ಪಕ್ಕದ ಜಮೀನು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಿಪಿ-2 ರಿಂದ ನಿಪಿ-4 ಇವುಗಳಿಗೆ ಸಂಬಂಧಿಸಿದ ಜಮೀನುಗಳು ನೀರಾವರಿ ಜಮೀನುಗಳಿದ್ದು, ನನ್ನ ಜಮೀನು ಒಣಬೇಸಾಯದ ಜಮೀನು ಇದ್ದು, ಅವುಗಳಲ್ಲಿ ನಿಗದಿಪಡಿಸಿದ ಬೆಲೆಯನ್ನು ನನ್ನ ಜಮೀನಿಗೆ ನಿಗದಿಪಡಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಿಪಿ-4 ಖರೀದಿ ಪತ್ರದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಹೊರಡಿಸಿದ ಅಧಿಸೂಚನೆಯ ದಿನಾಂಕದ ನಂತರ ನೊಂದಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

5. ನಿಪಿ-5 ಮತ್ತು ನಿಪಿ-6 ಖರೀದಿ ಕರಾರು ಪತ್ರಗಳು ಸಾಲದ ಭದ್ರತೆಗಾಗಿ ತಯಾರಿಸಿದ ಖರೀದಿ ಕರಾರು ಪತ್ರವಿರುತ್ತದೆ ಎಂದರೆ ಸರಿಯಲ್ಲ. ನಿಪಿ-5 ಮತ್ತು ನಿಪಿ-6 ಖರೀದಿ ಕರಾರು ಪತ್ರಗಳು ನಂತರ ಖರೀದಿ ಪತ್ರವಾಗಿರುವ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ನಿಪಿ-5 ಮತ್ತು ನಿಪಿ-6 ಖರೀದಿ ಕರಾರು ಪತ್ರಗಳನ್ನು ಆಧರಿಸಿ ನಮ್ಮ ಜಮೀನಿಗೆ ಪರಿಹಾರ ನಿಗದಿಪಡಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

6. 1ನೇ ಪ್ರತಿವಾದಿಯವರು ನಮಗೆ ಯಾವುದೇ ನೋಟಿಸ ಜಾರಿ ಮಾಡಿರುವುದಿಲ್ಲ. ನಮ್ಮ ಜಮೀನು ನೀರಾವರಿ ಜಮೀನು ಇರುತ್ತದೆ ಎಂದು ಹೇಳಿ 1ನೇ ಪ್ರತಿವಾದಿಯವರ ಸಮಕ್ಷಮ ಯಾವುದೇ

ತಕರಾರು ಸಲ್ಲಿಸಿರುವುದಿಲ್ಲ, ತಕರಾರು ಸಲ್ಲಿಸಲು ಯಾವುದೇ ತೊಂದರೆ ಇಲ್ಲ. 1ನೇ ಪ್ರತಿವಾದಿ ಅಧಿಕಾರಿಗಳು ನಮ್ಮ ಜಮೀನಿಗೆ ಬಂದು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಜಮೀನಿನ ಮಣ್ಣು ಪರೀಕ್ಷಿಸಿ ಸೂಕ್ತ ಪರಿಹಾರ ನಿಗದಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು ನಮ್ಮ ಜಮೀನಿಗೆ ಸೂಕ್ತ ಪರಿಹಾರ ನಿಗದಿ ಮಾಡಿದ್ದರೂ, ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಸರಿಯಲ್ಲ.

**2ನೇ ಪ್ರತಿವಾದಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿರುವುದಿಲ್ಲ , ಆದ್ದರಿಂದ ವಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)

1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.